# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1361

ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 19.03.2025

ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಲವು ಗ್ರಾಮಗಳಲ್ಲಿ ರೈತರ ಹೊಲಗಳಿಗೆ ತೆರಳಲು ಇರುವ ಕಾವಲುದಾರಿ ಮತ್ತು ಬಂಡಿ ಜಾಡು ರಸ್ತೆಯನ್ನು ಕೆಲವು ಭೂ ಮಾಲೀಕರು ಒತ್ತುವರಿ ಮಾಡಿಕೊಂಡು ರೈತರಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| ಆ) | ಸದರಿ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 23 ಎಲ್‌ಜಿಪಿ 2022, ದಿನಾಂಕ:20.10.2023 ರಲ್ಲಿ ತಾಲ್ಲೂಕಿನ ತಹಶೀಲ್ದಾರ್‌ಗಳು ನಕಾಶೆ ಕಂಡ ಕಾಲುದಾರಿ, ಬಂಡಿದಾರಿ ಅಥವಾ ರಸ್ತೆಗಳಲ್ಲಿ ಅನ್ಯ ಕೃಷಿ ಬಳಕೆದಾರರು ತಿರುಗಾಡಲು ಅವಕಾಶ ನೀಡದೆ ಅಡ್ಡಿಪಡಿಸುವಂತಹ ಅಥವಾ ಬಳಸಲು ಮುಚ್ಚಿರುವಂತಹ ಸಂದರ್ಭದಲ್ಲಿ ಅವುಗಳನ್ನು ತೆರವುಗೊಳಿಸಿ ಅಂತಹ ತಿರುಗಾಡಲು ಇರುವ ದಾರಿಗಳನ್ನು ಸುಗಮಗೊಳಿಸಲು ಕ್ರಮವಹಿಸುವಂತೆ ಸೂಚಿಸಿದೆ. |
| ಇ) | ಕೆಲವು ಹೊಲಗಳಿಗೆ ತೋಟಗಳಿಗೆ ನಕಾಶೆ ರಸ್ತೆಯೇ ಇಲ್ಲದ ಕಾರಣ ಅವರು ತೋಟಕ್ಕೆ ಕೃಷಿ ಸಲಕರಣೆ, ಗೊಬ್ಬರ, ತೋಟದ ಬೆಳೆಗಳ ಸಾಗಾಟಕ್ಕೆ ತೊಂದರೆ ಅನುಭವಿಸುತ್ತಿದ್ದು, ಅವರು ರಸ್ತೆ ಸೌಲಭ್ಯ ಪಡೆಯುವ ವಿಧಾನ ಯಾವುದು: | ಖಾಸಗಿ ಜಮೀನುಗಳಲ್ಲಿ ರೈತರು/ಸಾರ್ವಜನಿಕರು ರೂಡಿಗತ ರಸ್ತೆ ಮಾಡಿಕೊಂಡಿದ್ದಲ್ಲಿ ರಸ್ತೆಗಳನ್ನು ಅಕ್ಕ-ಪಕ್ಕದಲ್ಲಿರುವ ರೈತರು /ಭೂ ಮಾಲೀಕರು ಒಪ್ಪಿಕೊಂಡಲ್ಲಿ ಅಂತಹ ಜಮೀನುಗಳ ಮೇಲೆ ತಿರುಗಾಡುವ ಮತ್ತು ಇತರೆ ಅನುಭೋಗದ ಹಕ್ಕುಗಳನ್ನು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 59ರನ್ವಯ ಕ್ರಮವಹಿಸಲು ಅವಕಾಶವಿರುತ್ತದೆ. |
| ಈ) | ನಕಾಶೆ ರಸ್ತೆಯೇ ಇಲ್ಲದ ಜಮೀನಿಗೆ ರಸ್ತೆ ಸೌಲಭ್ಯ ಒದಗಿಸಲು ಜಮೀನಿನಲ್ಲಿ ಇರುವ ಖರಾಬು ಜಾಗವನ್ನು ಉಪಯೋಗಿಸಬಹುದೇ? (ಸುತ್ತೋಲೆ/ಆದೇಶದ ಪ್ರತಿಯೊಂದಿಗೆ ವಿವರವಾದ ಮಾಹಿತಿ ನೀಡುವುದು) | ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 71ರಡಿ ವಿಶೇಷ ಉದ್ದೇಶಗಳಿಗಾಗಿ ಜಮೀನನ್ನು ಕಾಯ್ದಿರಿಸಲು ಜಿಲ್ಲಾಧಿಕಾರಿಗಳಿಗೆ ಅವಕಾಶವಿರುತ್ತದೆ. |
| ಉ) | ರೈತರು ಭೂಮಿಯ ಮಾರುಕಟ್ಟೆಯ ಬೆಲೆ ನೀಡಿದ್ದಲ್ಲ ಹೊಲ/ತೋಟಕ್ಕೆ ರಸ್ತೆಯನ್ನು ಸರ್ಕಾರದ ವತಿಯಿಂದ ಭೂಮಿ ಖರೀದಿಸಿ ರೈತರಿಗೆ ರಸ್ತೆಯನ್ನು ಮಾಡಿಕೊಡಲಾಗುವುದೇ? (ವಿವರ ನೀಡುವುದು) | ಅಕ್ಕ-ಪಕ್ಕದಲ್ಲಿರುವ ರೈತರು /ಭೂ ಮಾಲೀಕರು ಒಪ್ಪಿಕೊಂಡಲ್ಲಿ ಅಂತಹ ಜಮೀನುಗಳ ಮೇಲೆ ತಿರುಗಾಡುವ ಮತ್ತು ಇತರೆ ಅನುಭೋಗದ ಹಕ್ಕುಗಳನ್ನು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 59ರನ್ವಯ ಕ್ರಮವಹಿಸಲು ಅವಕಾಶವಿರುತ್ತದೆ. |

ಸಂಖ್ಯೆ: ಆರ್‌ಡಿ 59 ಎಲ್‌ಜಿಕ್ಯೂ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು